# ಬೆಂಗಳೂರು ಉತ್ತರ ವಿಶ್ವವಿದ್ಯಾಲಯ

ಶ್ರೀ ದೇವರಾಜ ಅರಸು ಬಡಾವಣೆ, ಟಮಕ, ಕೋಲಾರ – 563 103
+91 8152 243150/243152/243153

ಸಂಖ್ಯೆ : ಬೆಂಉವಿ/ ಬಿ.ಇಡಿ / ಸಂಯೋಜನೆ /01 /2019-20 ದಿನಾಂಕ:-15.07.2019

**ಅಧಿಸೂಚನೆ**

**ವಿಷಯ** : 2019-20ನೇ ಶೈಕ್ಷಣಿಕ ಸಾಲಿಗೆ ಶಿಕ್ಷಣ ಕಾಲೇಜುಗಳ ಸಂಯೋಜನೆ ನವೀಕರಿಸುವ ಬಗ್ಗೆ.

**ಉಲ್ಲೇಖ** : 1. ಎನ್.ಸಿ.ಟಿ.ಇ. ಸಾರ್ವಜನಿಕ ಪ್ರಕಟಣೆ,
2. ವಿದ್ಯಾವಿಷಯಕ ಪರಿಷತ್ತಿನ ಸಭೆಯ ನಿರ್ಣಯ ದಿನಾಂಕ: 30.05.2019.
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 24/7/2019

****

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ 59ನೇ ಪ್ರಕರಣದ 17ನೇ ಉಪಬಂಧದಲ್ಲಿ ಪದತ್ತವಾದ ಅಧಿಕಾರದನ್ವಯ ಬೆಂಗಳೂರು ಉತ್ತರ ವಿಶ್ವವಿದ್ಯಾಲಯವು 2019-20ನೇ ಶೈಕ್ಷಣಿಕ ಸಾಲಿಗೆ ಈ ಕೆಳಕಂಡ ಶಿಕ್ಷಣ ಕಾಲೇಜಿನಲ್ಲಿ ನಡೆಸಲಾಗುತ್ತಿರುವ ಬಿ.ಇಡಿ ಕೋರ್ಸ್‌ಗೆ ಅದರ ಮುಂದೆ ನಮೂದಿಸಿರುವ ವಿಧ್ಯಾರ್ಥಿ ಪ್ರಮಾಣದೊಂದಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಸಂಯೋಜನೆಯನ್ನು ನವೀಕರಿಸಲಾಗಿದೆ.

| ಕ್ರಮ ಸಂಖ್ಯೆ | ಕಾಲೇಜಿನ ಹೆಸರು ಮತ್ತು ವಿಳಾಸ | ಕೋರ್ಸ್ | ವಿದ್ಯಾರ್ಥಿ ಪ್ರಮಾಣ |
|---|---|---|---|
| 01 | **ಎಸ್.ಇ.ಎ. ಕಾಲೇಜ್ ಆಫ್ ಎಜುಕೇಷನ್**<br>ಬಸವನಪುರ, ವಿರಗೋನಗರ ಅಂಚೆ, ಬೆಂಗಳೂರು – 49. | ಬಿ.ಇಡಿ | 100 |
| 02 | **ಎಸ್.ಸಿ.ಟಿ. ಕಾಲೇಜ್ ಆಫ್ ಎಜುಕೇಷನ್,**<br>ವಿಜ್ಞಾನನಗರ, ಕಗ್ಗದಾಸಪುರ ಮುಖ್ಯ ರಸ್ತೆ, ತಿಪ್ಪಸಂದ್ರ ಬೆಂಗಳೂರು – 75. | ಬಿ.ಇಡಿ | 100 |
| 03 | **ಎಸ್.ಜಿ.ಇ.ಎಸ್. ಕಾಲೇಜ್ ಆಫ್ ಎಜುಕೇಷನ್,**<br>ಮೇಡಹಳ್ಳಿ, ಹಳೆ ಮದ್ರಾಸು ರಸ್ತೆ, ಬೆಂಗಳೂರು – 49. | ಬಿ.ಇಡಿ | 100 |
| 04 | **ಗೇರ್ ಇನೋವೇಟಿವ್ ಬಿ.ಇಡಿ ಕಾಲೇಜ್,**<br>ಸರ್ಜಾಪುರ ರಸ್ತೆ, ದೊಡ್ಡಕಾನೆಹಳ್ಳಿ, ಬೆಂಗಳೂರು- 35. | ಬಿ.ಇಡಿ | 100 |
| 05 | **ಎಂ.ವಿ.ಜೆ. ಕಾಲೇಜ್ ಆಫ್ ಎಜುಕೇಷನ್,**<br>ಮಾರತ್‌ಹಳ್ಳಿ ಹೆಚ್.ಎ.ಎಲ್. ಕಾಲೋನಿ, ಬೆಂಗಳೂರು – 37. | ಬಿ.ಇಡಿ | 100 |
| 06 | **ನಳಂದಾ ಕಾಲೇಜ್ ಆಫ್ ಎಜುಕೇಷನ್,**<br>ಅಂಚೆ ನಂ.10, ಡಿ.ಎಸ್.ರಸ್ತೆ, ದೇವನಹಳ್ಳಿ – 562 110. | ಬಿ.ಇಡಿ | 100 |
| 07 | **ಶ್ರೀ ಕೃಷ್ಣ ಕಾಲೇಜ್ ಆಫ್ ಎಜುಕೇಷನ್,**<br>ಶ್ರೀ ವೇಣುಗೋಪಾಲಸ್ವಾಮಿ ಎಜುಕೇಷನ್ ಕಾಂಪ್ಲೇಕ್ಸ್ ಬೈಚಾಪುರ ರಸ್ತೆ, ದೇವನಹಳ್ಳಿ – 562 110. | ಬಿ.ಇಡಿ | 100 |
| 08 | **ಲಾವಣ್ಯ ಕಾಲೇಜ್ ಆಫ್ ಎಜುಕೇಷನ್,**<br>ರಮಾನಂದ ಆಶ್ರಮ, ದೊಡ್ಡಬಳ್ಳಾಪುರ – 561 203. | ಬಿ.ಇಡಿ | 50 |
| 09 | **ಶ್ರೀ ಕೊಂಗಾಡಿಯಪ್ಪ ಕಾಲೇಜ್ ಆಫ್ ಎಜುಕೇಷನ್,**<br>ದೊಡ್ಡಬಳ್ಳಾಪುರ – 561 203. | ಬಿ.ಇಡಿ | 100 |
| 10 | **ಗೋಲ್ಡ್ ಫೀಲ್ಡ್ ಕಾಲೇಜ್ ಆಫ್ ಎಜುಕೇಷನ್,(ಪರಮನೆಂಟ್‌ಪಿಲಿಯೇಷನ್)**<br>ಕೋಲಾರ ರಸ್ತೆ, ಕಾರಹಳ್ಳಿ ಎಕ್ಸಟೆನಷನ್, ಬಂಗಾರಪೇಟೆ – 563 114. | ಬಿ.ಇಡಿ | 50 |

| | | | |
|---|---|---|---|
| 11 | **ವಿಷ್ಣು ಬಿ.ಇಡಿ. ಕಾಲೇಜು,**<br>ಹುನಸನಹಳ್ಳಿ, ಬಂಗಾರಪೇಟೆ – 563 114. | ಬಿ.ಇಡಿ | 50 |
| 12 | **ಶ್ರೀಮತಿ. ಇಂದಿರಾ ಬಿ.ಇಡಿ. ಕಾಲೇಜು,**<br>ಬೂದಿಕೋಟೆ, ಬಂಗಾರಪೇಟೆ ತಾಲ್ಲೂಕು – 563 114. | ಬಿ.ಇಡಿ | 50 |
| 13 | **ರವಿ ಕಾಲೇಜ್ ಆಫ್ ಎಜುಕೇಷನ್,**<br>2ನೇ ಕ್ರಾಸ್, ಗೌರಿಪೇಟೆ, ಕೋಲಾರ – 563 101. | ಬಿ.ಇಡಿ | 100 |
| 14 | **ರಾಕ್ ವ್ಯಾಲಿ ಟೀಚರ್ಸ್ ಕಾಲೇಜ್,**<br>ಶ್ರೀ ಸಾಯಿ ಸದನ, ಕೆಎನ್‌ಎಸ್ ಹಾಸ್ಪಟಲ್, ಬಂಗಾರಪೇಟೆ ರಸ್ತೆ,<br>ಕೋಲಾರ – 563 101. | ಬಿ.ಇಡಿ | 100 |
| 15 | **ಶ್ರೀ ಹೇಮಾದ್ರಿ ಬಿ.ಇಡಿ ಕಾಲೇಜು,**<br>ಮೂರಾಂಡಹಳ್ಳಿ, ಅರೆಕಲ್ಲಹಳ್ಳಿ ಅಂಚೆ, ಶ್ರೀನಿವಾಸಪುರ ರಸ್ತೆ, ಕೋಲಾರ – 563 101. | ಬಿ.ಇಡಿ | 50 |
| 16 | **ಸುಗುಣ ಬಿ.ಇಡಿ ಕಾಲೇಜು,**<br>ದೀಪ್ತಿ ಮಹಲ್ ಹಿಂಬಾಗ, ಟಮಕ, ಕೋಲಾರ – 563 101. | ಬಿ.ಇಡಿ | 50 |
| 17 | **ಅರಿಸ್ಟಾಟಲ್ ಕಾಲೇಜ್ ಆಫ್ ಎಜುಕೇಷನ್,**<br>ಅಂಡರ್‌ಸನ್‌ಪೇಟೆ, ಕೆ.ಜಿ.ಎಫ್. – 563 117. | ಬಿ.ಇಡಿ | 100 |
| 18 | **ಶ್ರೀ ವೀಜಯೇಂದ್ರ ಬಿ.ಇಡಿ ಕಾಲೇಜು,**<br>ಯರಗನಹಳ್ಳಿ ರಸ್ತೆ ಊರ್ಗಾಂ, ಕೆ.ಜಿ.ಎಫ್. – 563 117. | ಬಿ.ಇಡಿ | 50 |
| 19 | **ಶ್ರೀ ಬಾಪೂಜಿ ಕಾಲೇಜ್ ಆಫ್ ಎಜುಕೇಷನ್,**<br>ಗುಡ್ಡನಹಳ್ಳಿ ರಸ್ತೆ, ಮಾಲೂರು – 563 130. | ಬಿ.ಇಡಿ | 50 |
| 20 | **ಮಾನಸ ಬಿ.ಇಡಿ ಕಾಲೇಜು,**<br>ಅರಲೇರಿ ಮುಖ್ಯ ರಸ್ತೆ, ವೈಟ್ ಗಾರ್ಡನ್, ಮಾಲೂರು – 563 130. | ಬಿ.ಇಡಿ | 100 |
| 21 | **ಎಇ ಅಂಡ್ ಸಿಎಸ್ ರಾಮಪ್ರಿಯ ಕಾಲೇಜ್ ಆಫ್ ಎಜುಕೇಷನ್,** ಬೆಂಗಳೂರು – ಚೆನ್ನೈ ಬೈಪಾಸ್ ರಸ್ತೆ, ಮುಳಬಾಗಿಲು–563 131. | ಬಿ.ಇಡಿ | 100 |
| 22 | **ಶಾರದ ಕಾಲೇಜ್ ಆಫ್ ಎಜುಕೇಷನ್,**<br>ಮುಳಬಾಗಿಲು – 563 131. | ಬಿ.ಇಡಿ | 50 |
| 23 | **ಬಸವಶ್ರೀ ಕಾಲೇಜ್ ಆಫ್ ಎಜುಕೇಷನ್,**<br>ಕೋಲಾರ – 563 101. | ಬಿ.ಇಡಿ | 100 |
| 24 | **ಶ್ರೀ ದರ್ಮಗುರು ಬಿ.ಇಡಿ ಕಾಲೇಜು,**<br>ಬಾಗೇಪಲ್ಲಿ – 562 207. | ಬಿ.ಇಡಿ | 50 |
| 25 | **ಪ್ರಗತಿ ಕಾಲೇಜ್ ಆಫ್ ಎಜುಕೇಷನ್,**<br>ಎಂ.ಜಿ.ರಸ್ತೆ, ಚಿಂತಾಮಣಿ – 563 125. | ಬಿ.ಇಡಿ | 50 |
| 26 | **ವಿಕ್ರಮ್ ಕಾಲೇಜ್ ಆಫ್ ಎಜುಕೇಷನ್,**<br>ರೈಲ್ವೇ ಟ್ರಾಕ್ ಹತ್ತಿರ, ಚೆಳೂರು ರಸ್ತೆ, ಚಿಂತಾಮಣಿ – 563 125. | ಬಿ.ಇಡಿ | 50 |
| 27 | **ನೂರಿ ಕಾಲೇಜ್ ಆಫ್ ಎಜುಕೇಷನ್,**<br>**ಆಲ್–ಅಜ್ಮ್, ನೂರಿನಿಸ್ಸ್ ರಸ್ತೆ, ಹ್ಯಾನಡರಸನ್, ಕೆ.ಜಿ.ಎಫ್ – 563 113** | ಬಿ.ಇಡಿ | 50 |

ಶಾಶ್ವತ ಸಂಯೋಜನೆ ಹೊಂದಿರುವ ಕಾಲೇಜುಗಳು

| | | | |
|---|---|---|---|
| 28 | ಮೀರಾಂಡ ಕಾಲೇಜ್ ಆಫ್ ಎಜುಕೇಷನ್, ಸಿಎ–52, ಹೆಚ್‌ಎಎಲ್ 3ನೇ ಹಂತ, ಇಂದಿರಾನಗರ, ಬೆಂಗಳೂರು–75. (ಪರಮನೆಂಟ್ ಅಫಿಲಿಯೇಷನ್) | ಬಿ.ಇಡಿ | 50 |
| 29 | ನ್ಯೂ ಹಾರಿಜಾನ್ ಕಾಲೇಜ್ ಆಫ್ ಎಜುಕೇಷನ್, 100 ಅಡಿ ರಸ್ತೆ, ಹೆಚ್‌ಎಎಲ್ 2ನೇ ಹಂತ, ಇಂದಿರಾನಗರ, ಬೆಂಗಳೂರು–08. (ಪರಮನೆಂಟ್ ಅಫಿಲಿಯೇಷನ್) | ಬಿ.ಇಡಿ | 50 |
| 30 | ಸರ್ಕಾರಿ ಶಿಕ್ಷಣ ಕಾಲೇಜು, ಚಿತ್ರಾವತಿ ಕ್ಯಾಂಪಸ್, ಬಿ.ಬಿ.ರಸ್ತೆ, ಎನ್.ಹೆಚ್. – 7, ಹೊನ್ನೆನಹಳ್ಳಿ, ಮಂಚನಬೆಲೆ ಅಂಚೆ, ಚಿಕ್ಕಬಳ್ಳಾಪುರ – 562 101. (ಪರಮನೆಂಟ್ ಅಫಿಲಿಯೇಷನ್) | ಬಿ.ಇಡಿ | 50 |
| 31 | ಶ್ರೀ ಕೆ. ವೆಂಕಟಪತಪ್ಪ ಕಾಲೇಜ್ ಆಫ್ ಎಜುಕೇಷನ್, ಸಿ.ವಿ.ವಿ.ಕ್ಯಾಂಪಸ್, ಚಿಕ್ಕಬಳ್ಳಾಪುರ – 562 101. (ಪರಮನೆಂಟ್ ಅಫಿಲಿಯೇಷನ್) | ಬಿ.ಇಡಿ | 100 |

ವಿ.ಸೂ : 2019–20ನೇ ಸಾಲಿನ ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನು ಲಗ್ಗತಿಸಿದೆ. ಕಾಲೇಜುಗಳಿಗೆ ಸಿಂಡಿಕೇಟ್ ನಿಗಧಿಪಡಿಸಿದ ವಿಧ್ಯಾರ್ಥಿ ಪ್ರಮಾಣದೊಂದಿಗೆ ಮಾತ್ರ ಸಂಯೋಜನೆಯನ್ನು ನವೀಕರಿಸಲಾಗಿದೆ. ಕಾಲೇಜು 15 ದಿನಗಳ ಒಳಗಾಗಿ ಸ್ಥಳೀಯ ವಿಚಾರಣಾ ಸಮಿತಿಯ ವರದಿಯಲ್ಲಿ ನಮೂದಿಸಿರುವ ಕೊರತೆಗಳನ್ನು ಸರಿದೂಗಿಸಿಕೊಂಡು ಉತ್ತಮ ಪಡಿಸಿಕೊಂಡಿರುವ ಬಗ್ಗೆ ಹಾಗೂ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡಿರುವ ಕುರಿತು ಅನುಸರಣಾ ವರದಿಯನ್ನು ನೀಡತಕ್ಕದ್ದು. ಇಲ್ಲವಾದಲ್ಲಿ ಮುಂದಿನ ಶೈಕ್ಷಣಿಕ ವರ್ಷದ ಸಂಯೋಜನಾ ನವೀಕರಣದ ಅರ್ಜಿಯನ್ನು ಸ್ವೀಕರಿಸಲಾಗುವುದಿಲ್ಲ.

*ಸರ್ಕಾರದ ಪತ್ರ ಸಂಖ್ಯೆ : ಇಡಿ 346 ಯುಬಿವಿ 2016, ದಿನಾಂಕ : 29–06–2017ರಲ್ಲಿನ ನಿರ್ದೇಶನದಂತೆ ಶ್ರೀ ಎಸ್. ಕರಿಯಪ್ಪ ಕಾಲೇಜ್ ಆಫ್ ಎಜುಕೇಷನ್, ಕಳೆದ ಸಾಲಿನ ಹೆಚ್ಚುವರಿ ವಿಧ್ಯಾರ್ಥಿ ಪ್ರವೇಶದ ಕಾರಣ, ವಿಧ್ಯಾರ್ಥಿಪ್ರವೇಶದ 2ರಷ್ಟು ಸೀಟನ್ನು ಕಡಿತಗೊಳಿಸಲಾಗಿದೆ.

ಷರತ್ತುಗಳು :

1. ವಿಧ್ಯಾರ್ಥಿಗಳ ಪ್ರವೇಶವನ್ನು ಕಾಲಕಾಲಕ್ಕೆ ತಿದ್ದುಪಡಿಯಾದ ಕರ್ನಾಟಕ ಬಿ.ಇಡಿ. ಕೋರ್ಸುಗಳ ಅಭ್ಯರ್ಥಿಗಳ ಆಯ್ಕೆ ನಿಯಮಗಳನ್ವಯ ಕಟ್ಟು–ನಿಟ್ಟಾಗಿ ಪಡೆಯತಕ್ಕದ್ದು.
2. ಕರ್ನಾಟಕ ಬಿ.ಇಡಿ ಕೋರ್ಸುಗಳಿಗೆ ಅಭ್ಯರ್ಥಿಗಳ ಆಯ್ಕೆ ನಿಯಮಗಳು 1999ರ 2(1)ನೇ ನಿಯಮದಡಿಯಲ್ಲಿ ನಿರ್ಧರಿಸಲಾಗಿರುವ ವಿಧ್ಯಾರ್ಥಿ ಪ್ರಮಾಣಕ್ಕೆ ಅನುಗುಣವಾಗಿ ಮತ್ತು ಪೂರಕವಾಗಿ ವಿಧಿಸಲಾಗಿರುವ ಷರತ್ತುಗಳಿಗೊಳಪಟ್ಟು ವಿಧ್ಯಾರ್ಥಿಗಳ ಪ್ರವೇಶ ಪಡೆಯತಕ್ಕದ್ದು.
3. ಕಾಲೇಜುಗಳು ಎನ್.ಸಿ.ಟಿ.ಇ. ಅಧಿನಿಯಮ 1993ರ 14ನೇ ಪ್ರಕರಣದಡಿ ಮಾನ್ಯತೆಯನ್ನು ಹೊಂದಿರತಕ್ಕದ್ದು.
4. **ಕಾಲೇಜುಗಳು ಎನ್.ಸಿ.ಟಿ.ಇ. ಜಾರಿಗೊಳಿಸಿರುವ ನೋಟಿಸ್‌ನಲ್ಲಿ ನಿರ್ದಿಷ್ಟಪಡಿಸಲಾಗಿರುವ ಷರತ್ತುಗಳನ್ನು ಕಟ್ಟು–ನಿಟ್ಟಾಗಿ ಪೂರೈಸತಕ್ಕದ್ದು. ಎನ್.ಸಿ.ಟಿ.ಇ. ಮಾನ್ಯತೆ ಹೊಂದಿದ ಹೊರತು ಕಾಲೇಜು ವಿಧ್ಯಾರ್ಥಿಗಳ ಪ್ರವೇಶ ಪಡೆಯತಕ್ಕದ್ದಲ್ಲ.**
5. **ಕಾಲೇಜುಗಳು ಹೆಸರು, ಕಟ್ಟಡ, ಸ್ಥಳ ಬದಲಾವಣೆಗೆ ಎನ್.ಸಿ.ಟಿ.ಇ. ಸರ್ಕಾರ ಮತ್ತು ವಿಶ್ವವಿದ್ಯಾಲಯ ಅನುಮತಿಯನ್ನು ಕಡ್ಡಾಯವಾಗಿ ಪಡೆಯತಕ್ಕದ್ದು.**
6. ನಿರ್ದಿಷ್ಟ ವಿನಾಯಿತಿ ನೀಡಿದ ಹೊರತು ವಿಶ್ವವಿದ್ಯಾಲಯ ಮಂಜೂರು ಮಾಡಿರುವ ಮುಂದುವರಿಕೆ ಸಂಯೋಜನೆ ಮತ್ತು ಎನ್.ಸಿ.ಟಿ.ಇ. ಮಂಜೂರು ಮಾಡಿರುವ ಮಾನ್ಯತೆ ರಹಿತವಾಗಿ ವಿಧ್ಯಾರ್ಥಿಗಳ ಪ್ರವೇಶ ಪಡೆಯುವುದು, **ಕರ್ನಾಟಕ ಮಾನ್ಯತೆರಹಿತ ಮತ್ತು ಅಸಂಯೋಜಿತ ಶಿಕ್ಷಣ ಸಂಸ್ಥೆಗಳಿಗೆ ವಿಧ್ಯಾರ್ಥಿಗಳ ಪ್ರವೇಶ ನಿಷೇಧ ಅಧಿನಿಯಮ 1992ರ 3ನೇ ಪ್ರಕರಣದ ಉಲ್ಲಂಘನೆಯಾಗಿದ್ದು ಮೊಕದ್ದಮೆ ಹೂಡಲು ಆಕರ್ಷಿತವಾಗಿರುತ್ತದೆ.**
7. ನಿಗಧಿತ ವಿಧ್ಯಾರ್ಥಿ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ವಿಧ್ಯಾರ್ಥಿಗಳ ಪ್ರವೇಶ ಪಡೆಯುವುದು ಕೆ.ಎಸ್.ಯು. ಅಧಿನಿಯಮ 2000ದ 60ನೇ ಪ್ರಕರಣದ ಉಲ್ಲಂಘನೆಯಲ್ಲಿದೆ ಮೇಲ್ಕಂಡ 1992ರ ಅಧಿನಿಯಮ 4ನೇ

ಪ್ರಕರಣದ ಉಲ್ಲಂಘನೆ ಸಹ ಆಗಿದ್ದು, ಮೊಕದ್ದಮೆ ಹೂಡಲು ಅರ್ಕಷಿತವಾಗುವುದಲ್ಲದೆ ಸಂಯೋಜನೆ ಹಿಂತೆಗೆದುಕೊಳ್ಳಲು ಸಕಾರಣವಾಗುತ್ತದೆ.

8. ಸ್ಥಳೀಯ ವಿಚಾರಣಾ ಸಮಿತಿ ವಿಧಿಸಿರುವ ಷರತ್ತುಗಳನ್ನು ಕಟ್ಟು-ನಿಟ್ಟಾಗಿ ಪಾಲಿಸತಕ್ಕದ್ದು.
9. ವಿಶ್ವವಿದ್ಯಾಲಯವು, ಕಾಲೇಜಿನ ವಿದ್ಯಾರ್ಥಿಗಳು, ಬೋಧಕರು ಹಾಗೂ ಬೋಧಕೇತರ ನೌಕರರ ಬಗ್ಗೆ ಕಾಲಕಾಲಕ್ಕೆ ಹೊರಡಿಸುವ ನಿಯಮಾವಳಿ / ಪರಿನಿಯಮಾವಳಿ ಮತ್ತು ಆದೇಶಗಳನ್ನು ಕಾಲೇಜು ಪಾಲಿಸತಕ್ಕದ್ದು. ಕಾಲೇಜು, ವಿಶ್ವವಿದ್ಯಾಲಯದ ಸಂಯೋಜನಾ ಅಧಿಸೂಚನೆಗನುಗುಣವಾಗಿ ಕೋರ್ಸುಗಳಿಗೆ ನಿಗಧಿಪಡಿಸಿರುವ ವಿದ್ಯಾರ್ಥಿ ಪ್ರಮಾಣವನ್ನು ಮೀರದಂತೆ ಹಾಗೂ ವಿಶ್ವವಿದ್ಯಾಲಯವು ಕೋರ್ಸುಗಳಿಗೆ ನಿಗಧಿಪಡಿಸಿರುವ ಅರ್ಹತಾ ನಿಯಮಾವಳಿಗಳನ್ನು ಉಲ್ಲಂಘಿಸಿದಂತೆ ಕೋರ್ಸುಗಳಿಗೆ ವಿದ್ಯಾರ್ಥಿಗಳ ಪ್ರವೇಶವನ್ನು ಮಾಡಿಸಿಕೊಳ್ಳತಕ್ಕದ್ದು.
10. ವೈಶಾಕ ಗಿ/ಖ ರಾಜಸ್ಥಾನದ ರಾಜ್ಯ ಸರ್ಕಾರದ ವ್ಯಾಜ್ಯಕ್ಕೆ ಸಂಬಂಧಿಸಿದಂತೆ, ದಿನಾಂಕ:13-08-1997ರ ಸರ್ವೋಚ್ಛ ನ್ಯಾಯಾಲಯದ ತೀರ್ಪಿನಂತೆ, ಕಾಲೇಜು ಅಥವಾ ಕಛೇರಿ, ಕೆಲಸ ನಿರ್ವಹಿಸುವ ಸ್ಥಳಗಳಲ್ಲಿ, ಯಾವುದೇ ವ್ಯಕ್ತಿಯಿಂದ (ಬೋಧಕ / ಬೋಧಕೇತರ/ಆಡಳಿತ ಮಂಡಳಿ) ಅಥವಾ ವಿದ್ಯಾರ್ಥಿಯಿಂದ ಮಹಿಳೆಯರಿಗೆ / ವಿದ್ಯಾರ್ಥಿನಿಯರಿಗೆ ಯಾವುದೇ ರೀತಿಯ ಕಿರುಕುಳ, ಲೈಂಗಿಕ ಕಿರುಕುಳ ನೀಡುವುದು ಶಿಕ್ಷಾರ್ಹ ಅಪರಾಧವಾಗಿದೆ. ಯಾವುದೇ ವ್ಯಕ್ತಿ / ವಿದ್ಯಾರ್ಥಿ ಈ ರೀತಿಯಾದ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಲ್ಲಿ ಅಂತಹವರನ್ನು ಕೆಲಸದಿಂದ / ವಿದ್ಯಾರ್ಥಿದೆಸೆಯಿಂದ ವಿಮುಕ್ತಿಗೊಳಿಸಬಹುದಾಗಿದೆ. ಕಾಲೇಜು ಈ ರೀತಿಯ ಅಪರಾಧಗಳನ್ನು / ಚಟುವಟಿಕೆಗಳನ್ನು ಮಟ್ಟಹಾಕಲು ಸರ್ವೋಚ್ಛ ನ್ಯಾಯಲಯದ ಆದೇಶದಂತೆ ದೂರು ಸಮಿತಿಯನ್ನು ಸ್ಥಾಪನೆ ಮಾಡತಕ್ಕದ್ದು.
11. ವಿದ್ಯಾರ್ಥಿಗಳನ್ನು ಶೈಕ್ಷಣಿಕವಾಗಿ ಅಭಿವೃದ್ಧಿಗೊಳಿಸುವ ಮಟ್ಟಕ್ಕೆ ಕಾಲೇಜು ಕೋರ್ಸುಗಳ ಶಿಕ್ಷಣ ಕ್ರಮವನ್ನು ಉತ್ತಮಪಡಿಸತಕ್ಕದ್ದು. ವಿದ್ಯಾರ್ಥಿಗಳನ್ನು ಹಾಗೂ ಸೇವೆಯಲ್ಲಿರುವ ಬೋಧಕರುಗಳನ್ನು ಪ್ರಾಂಶುಪಾಲರು / ಆಡಳಿತಮಂಡಳಿಯವರು ಸಹಾನುಭೂತಿಯಿಂದ ನೋಡಿಕೊಳ್ಳತಕ್ಕದ್ದು.
12. ಕಾಲೇಜು ವಿನಾಕಾರಣ ವಿದ್ಯಾರ್ಥಿಗಳ ಅಂಕಪಟ್ಟಿ ಹಾಗೂ ಇತರೇ ದಾಖಲೆಗಳನ್ನು ಆರು ತಿಂಗಳ ಅವಧಿ ಮೀರದಂತೆ ತಮ್ಮಲ್ಲಿಯೇ ಇಟ್ಟುಕೊಳ್ಳತಕ್ಕದ್ದಲ್ಲ, ಪ್ರವೇಶ ಅನುಮೋದನೆಗಾಗಿ ಸಲ್ಲಿಸಿರುವ ಅಂಕಪಟ್ಟಿ ಹಾಗೂ ಇತರೇ ದಾಖಲೆಗಳನ್ನು, ಪ್ರವೇಶ ಅನುಮೋದನೆಯಾದ ನಂತರ ವಿದ್ಯಾರ್ಥಿಗಳಿಗೆ ತ್ವರಿತವಾಗಿ ಅವರಿಗೆ ವಿತರಣೆಯನ್ನು ಮಾಡಿ ವಿಶ್ವವಿದ್ಯಾಲಯಕ್ಕೆ ತಿಳಿಸತಕ್ಕದ್ದು.
13. ವಿದ್ಯಾರ್ಥಿಗಳು, ವರ್ಗಾವಣೆ ಪತ್ರವನ್ನು ನೀಡುವ ಬಗ್ಗೆ ಮನವಿ ಸಲ್ಲಿಸಿದ್ದಲ್ಲಿ, ಕಾಲೇಜು ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆ ನೀಡದೆ, ವರ್ಗಾವಣೆ ಪತ್ರವನ್ನು ನೀಡತಕ್ಕದ್ದು. ಈ ಬಗ್ಗೆ ಆ ವರ್ಷದ / ಸೆಮಿಷ್ಟರ್‌ನ ಪೂರ್ಣವಾಗದ ಅವಧಿಯ ಬೋಧನಾ ಶುಲ್ಕವನ್ನು ಹೊರತುಪಡಿಸಿ, ಯಾವುದೇ ಹೆಚ್ಚುವರಿ ಶುಲ್ಕವನ್ನು ವಸೂಲಿ ಮಾಡಲು ನಿಯಮಾವಳಿ ಪ್ರಕಾರ ಅನುಮತಿ ಇರುವುದಿಲ್ಲ.
14. ಯಾವುದೇ ರೀತಿಯಾದ ಕ್ಯಾಪಿಟೇಷನ್ ಶುಲ್ಕವನ್ನು ಕಾಲೇಜು ವಸೂಲಿ ಮಾಡತಕ್ಕದ್ದಲ್ಲ.
15. 2018-19ನೇ ಸಾಲಿಗೆ ಕೋರ್ಸುಗಳ ಸಂಯೋಜನಾ ನವೀಕರಣಕ್ಕೆ ಕಾಲೇಜು ತಪ್ಪದೆ ಅರ್ಜಿಯನ್ನು ಸಲ್ಲಿಸತಕ್ಕದ್ದು.
16. **ಐದು ವರ್ಷಗಳನ್ನು ಪೂರೈಸಿರುವ ಕಾಲೇಜುಗಳು ನ್ಯಾಕ್ (ಓಂಂಅ) ಅನುಮೋದನೆಯನ್ನು ಕೂಡಲೇ ಪಡೆದುಕೊಳ್ಳತಕ್ಕದ್ದು.**
17. ಪ್ರಾಂಶುಪಾಲರು, ಮೌಲ್ಯಮಾಪನ ಕಾರ್ಯಕ್ಕಾಗಿ ಅರ್ಹ ಶಿಕ್ಷಕರ ಪಟ್ಟಿಯನ್ನು ಸಂಬಂಧಿಸಿದ ಪರೀಕ್ಷಾ ಮಂಡಳಿಗಳ ಅಧ್ಯಕ್ಷರುಗಳಿಗೆ ತಪ್ಪದೇ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಕಾಲೇಜಿನ ಸಂಯೋಜನೆಯನ್ನು ರದ್ದುಪಡಿಸಲಾಗುವುದು.

ಆಜ್ಞೆ ಮೇರೆಗೆ

25/7

ಕುಲಸಚಿವರು

**ಗೆ,**

**ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರಿಗೆ**

ಪ್ರತಿಗಳು :

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
2. ನಿರ್ದೇಶಕರು, ಕಾಲೇಜು ಶಿಕ್ಷಣ ಆಯುಕ್ತರು, ಬೆಂಗಳೂರು – 560 001.
3. ಕುಲಸಚಿವರು (ಮೌಲ್ಯಮಾಪನ), ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಶ್ರೀ ದೇವರಾಜ ಅರಸು ಬಡಾವಣೆ, ಟಮಕ, ಕೋಲಾರ – 563 103.
4. ಅಧ್ಯಕ್ಷರು, ಎನ್.ಸಿ.ಟಿ.ಇ., ಎಸ್. ಆರ್.ಸಿ.ಎಫ್., ನ್ಯಾಷನಲ್ ಲಾ ಸ್ಕೂಲ್ ಎದುರು, ನಾಗರಭಾವಿ, ಬೆಂಗಳೂರು – 560 072.
5. ಪ್ರಾದೇಶಿಕ ನಿರ್ದೇಶಕರು, ಎನ್.ಸಿ.ಟಿ.ಇ., ಎಸ್. ಆರ್.ಸಿ.ಎಫ್., ನ್ಯಾಷನಲ್ ಲಾ ಸ್ಕೂಲ್ ಎದುರು, ನಾಗರಭಾವಿ, ಬೆಂಗಳೂರು – 560 072.
6. ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಭೇತಿ ನಿರ್ದೇಶಕರು, 100 ಅಡಿ ರಿಂಗ್ ರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು – 560 085.
7. ವಿಶೇಷಾಧಿಕಾರಿಗಳು, ಕೇಂದ್ರೀಕೃತ ಪ್ರವೇಶ ಘಟಕ, ಕಾವೇರಿ ಭವನದ ಎದುರು, ಬೆಂಗಳೂರು – 560 009.
8. ಉಪಕುಲಸಚಿವರು; ಅಧೀಕ್ಷಕರು; ಶೈಕ್ಷಣಿಕ ವಿಭಾಗ – 1 /4 ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಶ್ರೀ ದೇವರಾಜ ಅರಸು ಬಡಾವಣೆ, ಟಮಕ, ಕೋಲಾರ – 563 103.
9. ಸಮನ್ವಯಾಧಿಕಾರಿಗಳು, ಅಂಕಿ ಅಂಶಗಳ ವಿಭಾಗ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಶ್ರೀ ದೇವರಾಜ ಅರಸು ಬಡಾವಣೆ, ಟಮಕ, ಕೋಲಾರ – 563 103.
10. ಕಛೇರಿ ಪ್ರತಿ.